# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 613 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕೆ.ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 21.02.2023 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆಯ ಯಾಡಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯಮಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು; | ಉಡುಪಿ ಜಿಲ್ಲೆಯ ಯಾಡಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಒಟ್ಟು 11 ಉದ್ಯಮಗಳು ಕಾರ್ಯನಿರ್ವಹಿಸುತ್ತಿವೆ. ವಿವರಗಳು ಕೆಳಗಿನಂತಿವೆ:<br>1. ಮೆ. ಚಿತ್ತಾರ ಕ್ಯಾಶ್ಯೂ ಫ್ಯಾಕ್ಟರಿ,<br>2. ಮೆ. ಆಯಿಷಾ ಗೇರು ಬೀಜ ಫ್ಯಾಕ್ಟರಿ<br>3. ಮೆ. ನಾರಾಯಣ ಪ್ರಸಾದ್ ರೈಸ್ ಮಿಲ್<br>4. ಮೆ. ರಾಘವೇಂದ್ರ ರೈಸ್ ಮಿಲ್<br>5. ಮೆ. ಸಂತೋಷ್ ಕುಲಾಲ್ ಎಣ್ಣೆ ಮಿಲ್<br>6. ಮೆ. ಶ್ರೀ ಕೃಷ್ಣ ಪ್ಯಾಕೇಜಿಂಗ್ ಇಂಡಸ್ಟ್ರೀಸ್<br>7. ಮೆ. ಸುವರ್ಣ ಇಂಡಸ್ಟ್ರೀಸ್<br>8. ಮೆ. ಶ್ರೀ ಕೃಷ್ಣ ಬ್ಯಾಗ್<br>9. ಮೆ. ರವಿಕಿರಣ್ ಹ್ಯೂಮ್ ಪೈಪ್<br>10. ಮೆ. ರಾಜೇಶ್ ಕಾರಂತ್ ಜೆಲ್ಲಿ ಕ್ರಷರ್ ಇಂಡಸ್ಟ್ರೀ<br>11. ಮೆ. ಬಿ.ಎ.ನಬೀಸಾ ರಂಗನಕೆರೆ ಗೇರುಬೀಜ ಸಂಸ್ಕರಣೆ |
| ಆ) | ಯಾಡಾಡಿ ಗ್ರಾಮ ಪಂಚಾಯತ್‌ನ ವ್ಯಾಪ್ತಿಯಲ್ಲಿ ಉದ್ಯಮಗಳ ಪರವಾನಿಗೆಯನ್ನು ರದ್ದುಪಡಿಸಿದ ಪ್ರಕರಣಗಳೆಷ್ಟು ಅವು ಯಾವುವು; | ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಉದ್ಯಮಗಳ ಸ್ಥಾಪನೆಗೆ ಪರವಾನಗಿ ನೀಡುವ ಅಥವಾ ಹಾಲಿ ಇರುವ ಉದ್ಯಮಗಳು ಪರವಾನಗಿಯನ್ನು ರದ್ದುಪಡಿಸುವ ಅಧಿಕಾರವನ್ನು ಸ್ಥಳೀಯ ಗ್ರಾಮ ಪಂಚಾಯತ್ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹೊಂದಿರುತ್ತದೆ. ಅದರಂತೆ ಉತ್ಪಾದನೆ ಸ್ಥಗಿತಗೊಳಿಸಲಾದ ಘಟಕಗಳ ವಿವರಗಳು ಈ ಕೆಳಗಿನಂತಿವೆ:<br>1. ಜಲ್ಲಿ ಕ್ರಷರ್ ಇಂಡಸ್ಟ್ರೀ-ನಾಗಯ್ಯ ಶೆಟ್ಟಿ- ಗ್ರಾಮ ಪಂಚಾಯತ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಘಟಕದ ಉತ್ಪಾದನೆಯನ್ನು ಸ್ಥಗಿತಗೊಳಿಸಿರುತ್ತಾರೆ.<br>2. ವೀಣಾ ಸತೀಶ್ ಪೂಜಾರಿ-ಮೆ: ನಿಸರ್ಗ ಕೋಕೊ ಪ್ರಾಡಕ್ಟ್ಸ್, ತೆಂಗಿನನಾರಿನ ಉತ್ಪನ್ನ ತಯಾರಿಸುವ ಚಟುವಟಿಕೆಯ ಘಟಕವನ್ನು ಸಾರ್ವಜನಿಕ ದೂರಿನ ಮೇಲೆ ಪರವಾನಗಿಯನ್ನು ರದ್ದುಪಡಿಸಿರುತ್ತಾರೆ.<br>3. ಚಾಮುಂಡೇಶ್ವರಿ ಪ್ಯಾಕೇಜಿಂಗ್ ಇಂಡಸ್ಟ್ರೀಸ್ – ಸಾಲ ಮರುಪಾವತಿ ಕುರಿತಂತೆ ಬ್ಯಾಂಕ್ ಸೀಜ್ ಮಾಡಿರುತ್ತದೆ |

| | | |
|---|---|---|
| (ಇ) | ರದ್ದುಪಡಿಸಿದ ಉದ್ಯಮಗಳು ಇನ್ನು ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ನಿಷ್ಕ್ರಿಯತೆಗೆ ಕಾರಣವೇನು? | ಈ ಬಗ್ಗೆ ಹಿರಿಯ ಪ್ರಾದೇಶಿಕ ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಮಂಗಳೂರು ಇವರು ಘಟಕದ ಚಟುವಟಿಕೆಯನ್ನು ಸ್ಥಗಿತಗೊಳಿಸುವ ಬಗ್ಗೆ ದಿನಾಂಕ:19.09.2022 ರಂದು ಆದೇಶ ಹೊರಡಿಸಿರುವುದಾಗಿ ತಿಳಿಸಿರುತ್ತಾರೆ. |

ಸಿಐ 24 ಎಸ್‌ಎಸ್‌ಐ 2023

(ಎನ್.ನಾಗರಾಜು (ಎಂ.ಟಿ.ಬಿ))
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು